822 (259) ಶ್ರೀ ರವಿ ಸಿ.ಟಿ. (ಚಿಕ್ಕಮಗಳೂರು): ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಖಾಸಗೀಕರಣಗೊಳಿಸಲು ಸರ್ಕಾರ ನಿರ್ಧರಿಸಿದೆಯೇ;

ಆ) ಖಾಸಗೀಕರಣ ಸಾಧಕ–ಬಾಧಕ ಮತ್ತು ಅದಕ್ಕೆ ಸಂಬಂಧಿಸಿದ ವಿವಿಧ ಪ್ರಕ್ರಿಯೆಗಳ ಬಗ್ಗೆ ಪರಿಶೀಲನೆ ನಡೆಸಲಾಗಿದೆಯೇ;(ಖಾಸಗೀಕರಣ ಪ್ರಕ್ರಿಯೆ ಪೂರ್ಣ ಮಾಹಿತಿ ನೀಡುವುದು);

ಇ) ಖಾಸಗೀಕರಣ ಪ್ರಕ್ರಿಯೆ ಕುರಿತು ಕಾರ್ಯ ನಿರ್ವಹಿಸುತ್ತಿರುವ ಸಲಹೆಗಾರರ ತಂಡದಲ್ಲಿರುವ ಸದಸ್ಯರು ಯಾರು;

ಈ) ಖಾಸಗೀಕರಣ ನಂತರ ಗ್ರಾಹಕರ ಹಿತಾಸಕ್ತಿ ಕಾಪಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಉ) ಖಾಸಗೀಕರಣದ ಪ್ರಕ್ರಿಯೆಯು ಯಾವ ಹಂತದಲ್ಲಿದೆ?

ಹೆಚ್.ಡಿ, ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಹೌದು.

ಆ) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಚಾಲನಾ ಸಮಿತಿಯು ಖಾಸಗೀಕರಣದ ಸಾಧಕ–ಬಾಧಕಗಳ ಬಗ್ಗೆ ಪರಿಶೀಲನೆ ನಡೆಸುತ್ತಿರುತ್ತದೆ. ಈ ಪರಿಶೀಲನಾ ಕಾರ್ಯವು ಪೂರ್ಣವಾಗಿರುವುದಿಲ್ಲ.

ಇ) ಖಾಸಗೀಕರಣ ಪ್ರಕ್ರಿಯೆ ಕುರಿತು ಕಾರ್ಯ ನಿರ್ವಹಿಸುತ್ತಿರುವ ಸಲಹೆಗಾರರ ತಂಡದಲ್ಲಿರುವ ಸದಸ್ಯರು ಈ ಕೆಳಕಂಡಂತೆ ಇದ್ದಾರೆ.

1. M/s. CMS Cameron Mckenna, London, U.K.
2. M/s. Delotte Touche Tohamastu Emerging Markets Ltd,
3. M/s. Consortium of CMS Cameron Mckenna & Others, Mumbai,

ಈ) ಪ್ರಸ್ತುತ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಗ್ರಾಹಕರ ಹಿತಾಸಕ್ತಿಯನ್ನು ಕಾಪಾಡುತ್ತಿದೆ. ಇದೇ ಆಯೋಗವು ಖಾಸಗೀಕರಣದ ನಂತರವು ವಿದ್ಯುತ್ ದರ ಪರಿಷ್ಕರಣೆ ಮತ್ತು ಗ್ರಾಹಕರ ಹಿತಾಸಕ್ತಿ ಇತ್ಯಾದಿಗಳನ್ನು ಕಾಪಾಡುವುದು. ಅಲ್ಲದೆ, ಯಾವುದೇ ವರ್ಗದ ಗ್ರಾಹಕರಿಗೆ ನಿಯಂತ್ರಣ ಆಯೋಗವು ನಿರ್ಧರಿಸಿದ ವಿದ್ಯುತ್ ದರ ಭರಿಸಲು ದುಬಾರಿಯೆನಿಸಿದರೆ ಸರ್ಕಾರ ಧನ ಸಹಾಯ ನೀಡಲು ಅವಕಾಶ ಇರುತ್ತದೆ.

ಉ) ಈಗಾಗಲೇ ಪ್ರಕಟಿಸಿರುವ ಖಾಸಗೀಕರಣದ ತಂತ್ರ ಉಪಯೋಗಿಸುವ ಬಗ್ಗೆ ಪರಿಶೀಲನಾ ಹಂತದಲ್ಲಿದೆ.

823 (990) ಶ್ರೀ ರವೀಂದ್ರ ನಾಥ್ ಎಸ್.ಎ. (ಮಾಯಕೊಂಡ): ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಆಲಮಟ್ಟಿ ಜಲವಿದ್ಯುತ್ ಯೋಜನೆ ಯಾವಾಗ ಪೂರ್ಣಗೊಳ್ಳುವುದು;

ಆ) ಈ ಯೋಜನೆಗೆ ನಿಗದಿಪಡಿಸಿದ ಹಣವೆಷ್ಟು;

ಇ) ಇದುವರೆಗೂ ಖರ್ಚು ಮಾಡಿದ ಹಣವೆಷ್ಟು;

ಈ) ಇನ್ನೂ ಎಷ್ಟು ಖರ್ಚಾಗಬಹುದೆಂಬ ಅಂದಾಜು ಮಾಡಲಾಗಿದೆ?